ಪರಿಭ್ರಮಣ ಕ್ರಿಯೆಯಲ್ಲಿ ಇಲ್ಲಿಂದ ಮತ್ತೆ ಭೂಗರ್ಭಯಾನ ಮಾಡುತ್ತಾ ಸಾಮಿ ಪಟ್ಟಣದ ಬಳಿ ಸಾಗರದಲ್ಲಿ ಮತ್ತೆ ಲೀನವಾಗುತ್ತದೆ.

ಆದರೆ, ಮೆಲಿಸ್ಸಾನಿ ಬರಿದಾಗದೇ ಈ ತಾಣದ ಅಸಮಾನ ಸರೋವರವಾಗಿ ಕೆಫಲೋನಿಯಾ ದ್ವೀಪವನ್ನು ಪ್ರವಾಸೀತಾಣವನ್ನಾಗಿ ಮಾಡಿದೆ. 1962ರಲ್ಲಿ ನಡೆದ ಉತ್ಖನನದಿಂದ ಪಾನ್ ಮತ್ತು ಮೆಲಿಸ್ಸಾನಿಯರನ್ನು ಪೂಜಿಸುತ್ತಿದ್ದ ಪಳೆಯುಳಿಕೆ, ಚಿತ್ರಗಳು ಕಂಡುಬಂದಿವೆ.

‘ಸಿನೋಟ್’ ಎಂದು ಕರೆಯಲಾಗುವ ಈ ಮೆಲಿಸ್ಸಾನಿ ಲೇಕ್ ಪ್ರಾಕೃತಿಕ ಮನೋಹರ ವಿದ್ಯಮಾನಕ್ಕೆ ಸಾಕ್ಷಿಯಾಗಿದೆ. ಸಿನೋಟ್ ಎಂದರೆ ನೈಸರ್ಗಿಕ ಬಾವಿ ಎನ್ನಬಹುದು. ಎಂದರೆ ಯಾವುದೇ ಗುಹೆಯ ಮೇಲ್ಭಾಗವೊಂದು ಶಿಥಿಲಗೊಂಡು ಕೆಳಬಿದ್ದು ಉಂಟಾದ ದೊಡ್ಡ ಅಗಲಗುಂಡಿಯು, ಕೆಳಭಾಗದಲ್ಲಿರುವ ನೀರಿನ ಮೂಲವನ್ನು ಲೋಕಕ್ಕೆ ಅನಾವರಣ ಮಾಡುತ್ತದೆ. ಈ ರಚನೆ ನಾವು ನಿರ್ಮಿಸುವ ಬಾವಿಯಂತೆಯೇ ಇರುವುದು ಅಚ್ಚರಿ. ಇಂತಹ ಮೆಲಿಸ್ಸಾನಿ ಸಾಮಾನ್ಯ ಸಿನೋಟ್ ಆಗಿರದೆ ವೈಭವೋಪೇತ ಬೆಡಗಿನಲ್ಲಿದ್ದು ಪ್ರವಾಸಿಗರನ್ನು ಆಕರ್ಷಿಸುವ ಪರಿ ಅನನ್ಯ.

ನಾವೂ ಡ್ರಾಗರಾಟಿ ಗುಹೆಯ ಭೇಟಿ ಮುಗಿಸಿ, ಈ ಲೇಕ್ ನೋಡಲು ಬಂದಾಗ ಗ್ರೀಸ್‌ನ ರಣರಣ ಬಿಸಿಲು ನೆತ್ತಿ ಚುರುಗುಟ್ಟಿಸಿತ್ತು. ಉದ್ದನೆ ಕ್ಯೂ ಟಿಕೆಟ್ಟಿಗೆ, ಹೆಚ್ಚು ಸ್ನೇಹಪರರಲ್ಲದ ಕೌಂಟರ್‌ನಲ್ಲಿನ ಅಧಿಕಾರಿಗಳು... ಇದರ ನಡುವೆ ಒಂದಷ್ಟು ಮುದ ನೀಡಿದ್ದು ತಣ್ಣಗೆ ಬೀಸುತ್ತಿದ್ದ ಗಾಳಿ. ದೂರದಲ್ಲಿ ಕಂಡ ಅಯೋನಿಯನ್ ಸಮುದ್ರವನ್ನು ಮುತ್ತಿಕ್ಕಿ ಸುಳಿದುಬಂದ ತಂಪು ಸ್ಪರ್ಶದ ಎಲರಾಗಿತ್ತು.

ಕಡೆಗೂ ಪ್ರವೇಶ ಆರಂಭವಾದಾಗ ನೆಲದಿಂದ ಕೆಳಕ್ಕಿರುವ ಮೆಟ್ಟಿಲುಗಳಿಳಿದು, ಅಲ್ಲಿದ್ದ ಉದ್ದ ಸುರಂಗದಂತಹ ಟನಲ್ಲಿನಲ್ಲಿ ಹೊಕ್ಕಾಗ ಮತ್ತಲ್ಲಿ ಕಿಕ್ಕಿರಿದು ನಿಂತ ಮಂದಿ. ತುದಿಯಲ್ಲಿ ಮೆಲಿಸ್ಸಾನಿಗೆ ಇಳಿವ ದ್ವಾರ; ಇಲ್ಲಿಂದ ಏನೂ ಕಾಣಿಸದು. ಮುಂದಿರುವವರು ಹತ್ತು ಹತ್ತು ಮಂದಿ ಗುಂಪಾಗಿ ಬಂದುನಿಂತ ದೋಣಿಗಳನ್ನು ಏರಬೇಕು. ಒಟ್ಟಿನಲ್ಲಿ ಮುಕ್ಕಾಲು ಗಂಟೆ ಕಳೆದಾಗ ನಮ್ಮ ಸರದಿ ಬಂದಿತು. ಅಲ್ಲಿ ದ್ವಾರದೆದುರಿಗೆ ಮಲಗಿದ್ದ ಸರೋವರ ಮನೋಹರ ಅಪ್ಸರ ಕನ್ಯೆಯಂತೇ ಫಳಫಳಿಸುತ್ತಿತ್ತು. ಎಂಥಾ ಬಣ್ಣ! ವೈಢೂರ್ಯದ ಕಡುನೀಲಿ, ಕಡುಹಸಿರು, ಛಾವಣಿಯಿಲ್ಲದೆ ಬೆತ್ತಲಾಗಿದ್ದ ಮೇಲ್ಭಾಗದಿಂದ ಬೀಳುತ್ತಿದ್ದ ಸೂರ್ಯರಶ್ಮಿಯ ಬಣ್ಣಗಳನ್ನು ಹೀರಿಕೊಳ್ಳುತ್ತಾ ಹಳದಿ, ಕೆಂಪು, ಗುಲಾಬಿ ಎಂದು ಒಂದೊಂದು ದಿಕ್ಕಲ್ಲಿ ಒಂದೊಂದು ಬಣ್ಣ ಮುಕ್ಕಳಿಸುವ ಸರೋವರದ ಗಮ್ಮತ್ತಿದ್ದುದೇ ಈ ವರ್ಣಗಳಾಟದಲ್ಲಿ. ನೀರಿನ ನೈಜಬಣ್ಣ ಯಾವುದೆನ್ನುವುದು ಯಾರಿಗೂ ತಿಳಿಯದು, ಅದು ಸೂರ್ಯನಿಲ್ಲದಿದ್ದಾಗ ಮಾತ್ರ.

ಒಬ್ಬೊಬ್ಬರೂ 6–10 ಯೂರೋ ಹಣ ತೆತ್ತು ಬೋಟಲ್ಲಿ ಕೂತಾಗ ಹದಿನೈದು ನಿಮಿಷ ಸರೋವರದ ಮಡಿಲಲ್ಲಿ ಜಗ ಮರೆತಿದ್ದಂತೂ ನಿಜ. ಇಲ್ಲಿ ಎರಡು ಭಾಗವಿದೆ; ಮೊದಲಿನದು ನಾಲ್ಕು ಭದ್ರ ಗುಹೆಯ ಗೋಡೆಗಳೊಳಗಿನ ಛಾವಣಿಯಿರದ ಸರೋವರ ಭಾಗ; ಎರಡನೆಯದು ಇಲ್ಲಿಂದ ಮುಂದಿನ ಇಕ್ಕಟ್ಟಾದ ದ್ವಾರದಲ್ಲಿ ಬೋಟು ನುಸುಳಿಹೋಗುವ ವಿಸ್ಮಯಕಾರಿ ರಚನೆಗಳ ಗುಹೆಯ ಭಾಗ. ಇಲ್ಲಿ ಭೂಗರ್ಭದ ನೀರು ಗುಹೆಯ ಗೋಡೆ, ಛಾವಣಿಯಿಂದ ಸುಣ್ಣಕಲ್ಲಿನ ಮುಖಾಂತರ ಇಳಿದು, ಖನಿಜಾಂಶವನ್ನು ಕರಗಿಸಿ ಕೆಳಮುಖವಾಗಿ ಬೀಳುವ ದೀರ್ಘಾವಧಿಯ ಪ್ರಕ್ರಿಯೆಯಲ್ಲಿ ಆ ಖನಿಜಾಂಶಗಳು ಇತರೇ ಮಣ್ಣು, ಮರಳು, ಗಟ್ಟಿಗೊಳ್ಳುವ ವಸ್ತುಗಳೊಡನೆ ಸೇರಿ ಚಿತ್ರವಿಚಿತ್ರ ‘ಸ್ಟಾಲಸ್ಟೈಟ್’ಗಳು ಅಥವಾ ನೀರ್ಗಲ್ಲ ಗೊಂಚಲುಗಳಾಗಿ ಪರಿವರ್ತಿತವಾಗುತ್ತವೆ. ಇವು ಛಾವಣಿಯಿಂದ ಇಳಿಬಿದ್ದ ಶಾಂಡಲಿಯರ್ (ದೀಪಗುಚ್ಛ)ಗಳಂತೆ, ಪ್ರಾಣಿಗಳ ಉದ್ದನೆಯ ಮೂತಿಯಂತೆ, ಮೊಸಳೆ, ಸರ್ಪಗಳಂತೆ ವೈವಿಧ್ಯಮಯ ಆಕಾರ ತಳೆದು ಕಲ್ಲಾಗಿ ರೂಪುಗೊಳ್ಳುತ್ತವೆ. ಇವನ್ನು ತೂಗುತೊಂಗಲು ಎಂದೂ ಹೇಳುತ್ತಾರೆ. ಸರೋವರದ ಈ ಗುಹಾಭಾಗ ಪೂರ್ತಿ ಇಂಥದ್ದೇ ವಿಸ್ಮಯ ಜಗತ್ತಿಗೆ ಮೀಸಲಾಗಿದೆ, ಇಲ್ಲಿ ಬೆಳಕಿಲ್ಲದ ಕತ್ತಲಿನ ಕಾರಣ ನೀರು ಬಣ್ಣದ ಬೆಡಗಿಯಲ್ಲ.

ಒಂದು ಸುತ್ತು ವರ್ಣಮಯ ಜಲಜಗತ್ತಿನ ದರ್ಶನ ಮಾಡಿ ದ್ವಾರದ ಬಳಿ ದೋಣಿ ನಿಂತಾಗ ಇನ್ನಷ್ಟು ಹೊತ್ತು ಅಲ್ಲಿ ಮಾತಿಲ್ಲದೆ ಕುಳಿತುಬಿಡುವ ಮನಸ್ಸಾಗಿತ್ತು. ಆದರೆ ಯಾರೂ ಇಲ್ಲಿ ಪಾದವೂರಿ ನಿಲ್ಲಲೂ ಜಾಗವಿಲ್ಲ, ಕೇವಲ ದೋಣಿಯಾನ, ಹತ್ತು, ಇಳಿ, ಹೊರಹೋಗು ಅಷ್ಟೇ.

ಕಡೆಗೂ ವಿಧಿಯಿಲ್ಲದೆ ತಿರುತಿರುಗಿ ಮರುಳು ಮಾಡಿದ ಆ ದಟ್ಟ ವರ್ಣಗಳ ಸರೋವರ ಅಥವಾ ನೈಸರ್ಗಿಕ ಬಾವಿಯನ್ನು ಇಷ್ಟಿಷ್ಟೇ ನೋಡುತ್ತಾ ಹೊರಬಂದಾಗ ಗ್ರೀಸ್ ದೇಶದ ಬಿಸಿಲು ನೆರಳು ಹುಡುಕುವಂತೆ ಓಡಿಸಿದ್ದು ಮರೆಯುವಂತಿಲ್ಲ.

ರಣರಣ ಬಿಸಿಲಲ್ಲಿ ಹೀಗೆ ಸುತ್ತಿಬಂದ ತನ್ನ ಪ್ರವಾಸಿಗರನ್ನು, ನಮ್ಮ ಹಡಗಿನ ಸಿಬ್ಬಂದಿ ಬೀಗರನ್ನು ಎದುರುಗೊಳ್ಳುವಂತೆ, ಬಂದರಿನ ಆರಂಭದಲ್ಲೇ ಸ್ಟಾಲ್ ಹಾಕಿ ಮುಖ ಒರೆಸಿಕೊಳ್ಳಲು ಛಿಲ್ ಮಾಡಿಟ್ಟ ತಣ್ಣಗಿನ ಕೈ ಟವೆಲ್, ವಿವಿಧ ಜೂಸ್, ನೀರು ರೆಡಿಯಿಟ್ಟು ಉಪಚರಿಸುವಾಗ, ಎಲ್ರೂ ಎರಡು ಗ್ಲಾಸ್ ಜೂಸ್ ಗಟಗಟನೆ ಕುಡಿದು ದಣಿವಾರಿಸಿಕೊಂಡವರೇ... ಈಗ ಹಡಗಿಗೇರುವ ಮೆಟ್ಟಿಲನ್ನು ಕುಣಿಕುಣಿದು ಹತ್ತೋ ಶಕ್ತಿ ಬಂದಿತ್ತು, ಕಣ್ಣು ಮನಸ್ಸಿನ ತುಂಬಾ ಮೆಲಿಸ್ಸಾನಿ ಅಪ್ಸರೆ ವರ್ಣಮಯ ರೇಷಿಮೆ ಉಡುಗೆಯಲ್ಲಿ ನರ್ತಿಸುತ್ತಿದ್ದಳು ಎಂದು ಬೇರೆ ಹೇಳಬೇಕಿಲ್ಲ!


ಲೇಕ್ ಮೆಲಿಸ್ಸಾನಿಯನ್ನು ಮೇಲಿನಿಂದ ಕಂಡಾಗ